ಬಿಸಿಲು ಬೆಳದಿಂಗಳು - 255 / ವಿಜಯ ಕರ್ನಾಟಕ (4.4.2013)



ಬಿಸಿಲು

ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಾರಿಹಬ್ಬ ಆಗುತ್ತಿರುವ ಚುನಾವಣೆಗಳು

"ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?" ಎಂಬ ಗಾದೆ ಮಾತನ್ನು ನೀವು ಕೇಳಿದ್ದೀರಿ. ಆದರೆ ಬೆಕ್ಕುಗಳೇ ತಮ್ಮ ಕೊರಳಿಗೆ ಗಂಟೆ ಕಟ್ಟಿಸಿಕೊಳ್ಳಲು ಮುಂದೆ ಬರುವುದನ್ನು ನೀವು ಎಲ್ಲಿಯಾದರೂ ಕೇಳಿದ್ದೀರಾ? ಹಾಗೆ ಮುಂದೆ ಬಂದರೆ ಗಂಟೆ ಕಟ್ಟಲು ಮುಂದಾಗಬೇಕೇ? ಅಥವಾ ಇದರಲ್ಲಿ ಏನೋ ಸಂಚು ಇದೆಯೆಂದು ಹೆದರಿ ಓಡಿಹೋಗಬೇಕೇ? ಇದು ಇಲಿಗಳ ದೃಷ್ಟಿಯಿಂದ ಹುಟ್ಟಿಕೊಂಡ ಗಾದೆ. ಆದರೆ ಇವೆಲ್ಲವುಗಳಿಗಿಂತ ಮುಖ್ಯವಾದ ಪ್ರಶ್ನೆ: ಬೆಕ್ಕು ಹೆಚ್ಚು ಉಪದ್ರವಜೀವಿಯೇ ಅಥವಾ ಇಲಿಗಳೇ? ಬೆಕ್ಕು ಕಳ್ಳನಡುಗೆಯಲ್ಲಿ ಬಂದು ಅಡುಗೆ ಮನೆಯಲ್ಲಿರುವ ಹಾಲು, ಮೊಸರು ತಿಂದು ಪಾತ್ರೆಪಡಗಗಳನ್ನು ಬೀಳಿಸಿದರೆ, ಇಲಿ ಹೆಗ್ಗಣಗಳು ಮನೆಯ ಗೋಡೆಗಳಲ್ಲಿ ಬಿಲ ಕೊರೆದು ದವಸ ಧಾನ್ಯಗಳನ್ನು ತಿಂದುಹಾಕುತ್ತವೆ. ಅಷ್ಟೇ ಅಲ್ಲ ಕಾಮಾಲೆ, ಪ್ಲೇಗು ಇತ್ಯಾದಿ ಸಾಂಕ್ರಾಮಿಕ ರೋಗಗಳಿಗೂ ಕಾರಣವಾಗುತ್ತವೆ. ಆದಕಾರಣ ಬೆಕ್ಕನ್ನು ಕಟ್ಟಿಹಾಕಬೇಕೇ ಅಥವಾ ಇಲಿಗಳನ್ನು ಸದೆಬಡಿಯಬೇಕೆ? ಅಚ್ಚರಿಯ ಸಂಗತಿಯೆಂದರೆ ಚುನಾವಣಾ ವೇಳಾ ಪಟ್ಟಿ ನಿಗದಿಯಾದ ಮೇಲೆ ಕಳೆದ ಒಂದೆರಡು ವಾರಗಳಿಂದ ಈ 'ಬೆಕ್ಕು'ಗಳ ಹಿಂದೆ 'ಇಲಿ'ಗಳು ಯಾವ ಭಯವೂ ಇಲ್ಲದೆ ಅಡ್ಡಾಡುತ್ತಿವೆ! ಅಷ್ಟೇ ಅಲ್ಲ ಅವುಗಳ ಕೊರಳಿಗೆ ಗಂಟೆ ಕಟ್ಟುವ ಬದಲು ಕುಣಿ(ಡಿ)ದು ಕುಪ್ಪಳಿಸಿ ಗುಣಗಾನವನ್ನೂ ಮಾಡುತ್ತಿವೆ! ಸ್ವಾಮಿಗಳ ಆಶೀರ್ವಾದ ಪಡೆಯಲು ಒಟ್ಟೊಟ್ಟಿಗೆ ಮಠಕ್ಕೆ ಬರುತ್ತಿವೆ! ದೇವರ ಗುಡಿಗೂ ಹೋಗುತ್ತಿವೆ! ದೇವಾಲಯದ ನಿರ್ಮಾಣಕ್ಕೆ ದೇಣಿಗೆ ಪಡೆದ ಕಾರಣ ಭಕ್ತಪರಾಧೀನನಾದ ದೇವರೂ ಸಹ ಓಟು ಹಾಕಿಸುವ ದಾಕ್ಷಿಣ್ಯಕ್ಕೆ ಒಳಗಾಗಿದ್ದಾನೆ!

ಚುನಾವಣೆಗಳು ಮಾರಿಹಬ್ಬಗಳಂತಾಗಿವೆ. ಜನರು ತಿಳಿದೂ ತಿಳಿದೂ ಹರಕೆಯ ಕುರಿಗಳಾಗುತ್ತಿದ್ದಾರೆ. 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು!' ಎಂಬಂತೆ ರಾಜಕಾರಣಿಗಳು ಒಡ್ಡುವ ಆಮಿಷಗಳಿಗೆ ಬಲಿಯಾಗುತ್ತಿದ್ದಾರೆ. ಮಾರಿಹಬ್ಬದ ದಿನ ಹರಕೆಯ ಕುರಿಗಳನ್ನು ಮೆರವಣಿಗೆ ಮಾಡುವಂತೆ ಅಭ್ಯರ್ಥಿಗಳು ಮತದಾರರನ್ನು ಓಲೈಸಿ ಮೆರೆಸುತ್ತಾರೆ. ಮತದಾನ ಮುಗಿದ ನಂತರ 'ನೀನು ಯಾರೋ ಮತ್ತೆ ನಾನು ಯಾರೋ' ಎಂಬಂತಹ ಸ್ಥಿತಿ! ರಾಜಕಾರಣಿಗಳು ಜನರನ್ನು ಭ್ರಷ್ಟರನ್ನಾಗಿಸಿದ್ದಾರೋ, ಜನರು ರಾಜಕಾರಣಿಗಳನ್ನು ಭ್ರಷ್ಟರನ್ನಾಗಿಸಿದ್ದಾರೋ ಹೇಳುವುದು ಕಷ್ಟ. ಇದು ಬೀಜವೃಕ್ಷ ನ್ಯಾಯದಂತೆ. ಬೀಜ ಮೊದಲೋ, ವೃಕ್ಷ ಮೊದಲೋ ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಕ್ಕಿಲ್ಲ! ಭ್ರಷ್ಟ ವ್ಯವಸ್ಥೆ ಇರುವುದರಿಂದ ಶುದ್ಧ ರೀತಿಯಲ್ಲಿ ಆಯ್ಕೆಯಾಗಿ ಬರುವುದು ಕನಸಿನ ಮಾತು ಎಂಬಂತಾಗಿದೆ. ಒಳ್ಳೆಯವರು ಕೆಟ್ಟ ವ್ಯವಸ್ಥೆಯಿಂದಾಗಿ ಕೆಟ್ಟವರಾಗಿದ್ದಾರೆಯೇ? ಅಥವಾ ಕೆಟ್ಟವರು ಒಳ್ಳೆಯ ವ್ಯವಸ್ಥೆಯನ್ನು ಹದಗೆಡಿಸಿದ್ದಾರೆಯೇ? 'ಶೀಲವಂತರ ಕೇರಿಯಲ್ಲಿ ಕೋಳಿ ಮಾಯವಾಯಿತು' ಎಂಬ ಗಾದೆಯ ಮಾತಿದೆ. ಕೇರಿಯಲ್ಲಿರುವವರೆಲ್ಲರೂ ಸಸ್ಯಾಹಾರಿಗಳೇ; ಮಾಂಸಾಹಾರಿಗಳಂತೂ ಅಲ್ಲವೇ ಅಲ್ಲ. ಆದರೆ ಕೇರಿಯನ್ನು ಹೊಕ್ಕ ಕೋಳಿ ಮಾತ್ರ ಯಾರ ಮನೆಗೆ ಹೋಯಿತೋ, ಅಂತೂ ಹೊರ ಬರಲಿಲ್ಲ; ಮಂಗ ಮಾಯವಾಯಿತು. ಅಂದರೆ ಏನರ್ಥ? ಅವಕಾಶ ಸಿಕ್ಕಾಗ ಒಳ್ಳೆಯವರೂ ಕೆಟ್ಟವರಾಗುತ್ತಾರೆ, ಒಳ್ಳೆಯತನವನ್ನು ಉಳಿಸಿಕೊಳ್ಳುವುದಿಲ್ಲ ಎಂದು ಇದರ ತಾತ್ಪರ್ಯ. ಅವಕಾಶ ವಂಚನೆಯಿಂದಾಗಿ ಅವರು ಒಳ್ಳೆಯವರೇ ಹೊರತು ಅವಕಾಶ ದೊರೆತರೆ ಅವರೂ ಕೆಟ್ಟವರಾಗುತ್ತಾರೆ.

ರಾಜಕಾರಣಿಗಳು ಜನರನ್ನು ಕೆಡಿಸಿದ್ದಾರೆಯೇ ಅಥವಾ ಜನರು ರಾಜಕಾರಣಿಗಳನ್ನು ಕೆಡಿಸಿದ್ದಾರೆಯೇ? ಮೇಲು ನೋಟಕ್ಕೆ ರಾಜಕಾರಣಿಗಳು ಕೆಟ್ಟವರೆಂಬ ಭಾವನೆಯಿದೆ. ಆದರೆ ಜನರೇನೂ ಸಂಭಾವಿತರಲ್ಲ. ಒಬ್ಬ ರಾಜಕಾರಣಿ ಹೇಳುವಂತೆ "ಮೊದಲ ಚುನಾವಣೆಗೆ ಅತಿ ಕಡಿಮೆ ಖರ್ಚು ಮಾಡಿದೆ. ಎರಡನೆಯ ಬಾರಿ ಹೆಚ್ಚು ಖರ್ಚು ಮಾಡಿದೆ. ಮೂರನೆಯ ಭಾರಿ ಅತಿ ಹೆಚ್ಚು ಖರ್ಚು ಮಾಡಿದೆ." ಆದರೆ ವಿರೋಧಾಭಾಸವೆಂದರೆ ಮೊದಲ ಚುನಾವಣೆಯಲ್ಲಿ ಆತ ಗಳಿಸಿದ ಮತಗಳು ಅತ್ಯಧಿಕ. ಎರಡನೆಯ ಬಾರಿ ಗಳಿಸಿದ ಮತಗಳು ಮೊದಲನೆಯ ಬಾರಿಗಿಂತ ಕಡಿಮೆ! ಮೂರನೆಯ ಬಾರಿ ಗಳಿಸಿದ ಮತಗಳು ಎರಡನೆಯ ಬಾರಿಗಿಂತ ಕಡಿಮೆ. ಇನ್ನೊಬ್ಬರು ಖರ್ಚು ಮಾಡುತ್ತಾರೆ ನಾನು ಮಾಡುವುದಿಲ್ಲವೆಂದರೆ ಗೆಲ್ಲಲು ಸಾಧ್ಯವಿಲ್ಲ ಎಂಬ ಭಾವನೆಯಿದೆ. ವಾಮಮಾರ್ಗದಿಂದಲೇ ಗೆಲ್ಲುವುದು ಸಾಧ್ಯವಿಲ್ಲವೆಂಬುದು ಗೊತ್ತು. ಆದರೆ ಬೇರೆಯವರು ವಾಮಮಾರ್ಗ ಹಿಡಿದಾಗ ನಾನೂ ಹಿಡಿಯದಿದ್ದರೆ ಗೆಲ್ಲುವುದು ಹೇಗೆಂಬ ಆತಂಕ ಎಲ್ಲರನ್ನೂ ಕಾಡುತ್ತಿದೆ. ಪ್ರತಿಯೊಬ್ಬರಿಗೂ ಇನ್ನೊಬ್ಬರ ಮೇಲೆ ಅನುಮಾನ.

ರಾಜಕಾರಣಿಗಳು ಚುನಾವಣೆಗೆ ಖರ್ಚು ಮಾಡುವ ಹಣ ವ್ಯಾಪಾರ ಉದ್ದಿಮೆಗಳಲ್ಲಿ ಹಾಕಿದ ಬಂಡವಾಳದಂತೆ. ವ್ಯಾಪಾರದಲ್ಲಿ ಬಂಡವಾಳ ಹಾಕಿದ ವಾಣಿಜ್ಯೋದ್ಯಮಿ ಹೆಚ್ಚಿನ ಲಾಭ ಪಡೆಯಲು ಪ್ರಯತ್ನಿಸುತ್ತಾನೆ. ಅದೇ ರೀತಿ ರಾಜಕೀಯವೂ ಒಂದು ದಂಧೆಯಾಗಿದೆ. ಏನೂ ಲಾಭವಿಲ್ಲವೆಂದರೆ ಯಾವ ದಡ್ಡನೂ ಬಂಡವಾಳ ಹಾಕಲು ಮುಂದಾಗುವುದಿಲ್ಲ. ಎಷ್ಟೇ ಪ್ರಾಮಾಣಿಕನಾಗಿದ್ದರೂ, ಜನಪರ ಕಾಳಜಿಯುಳ್ಳವನಾಗಿದ್ದರೂ ಹಣ ಇಲ್ಲದವನು ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲದಂತಾಗಿದೆ. ರಾಜಕೀಯ ಪಕ್ಷಗಳ ವರಿಷ್ಠರೂ ಸಹ ತಾವು ಆರಿಸುವ ಅಭ್ಯರ್ಥಿಗಳು ಗೆಲ್ಲುವ ಕುದುರೆಗಳಾಗಿರಬೇಕೆಂದು ಬಯಸುತ್ತಾರೆ. ಅಂದರೆ ಗೆಲ್ಲಲು ಖರ್ಚು ಮಾಡುವಷ್ಟು ಹಣ ಅವರಲ್ಲಿರಬೇಕೆಂದು

ನಿರೀಕ್ಷಿಸುತ್ತಾರೆ. ಅಷ್ಟೊಂದು ಖರ್ಚುಮಾಡಿ ಗೆದ್ದವನು ತಾನು ಹಾಕಿದ ಬಂಡವಾಳವನ್ನು ಬಡ್ಡಿ, ಚಕ್ರಬಡ್ಡಿ ಸಮೇತ ಜನರಿಂದ ವಸೂಲಿ ಮಾಡಿಕೊಳ್ಳುತ್ತಾನೆ. ಅವನ ಹಿತೈಷಿಗಳು ಒಂದು ರೀತಿಯಲ್ಲಿ ಉದ್ದಿಮೆಯ 'ಪಾರ್ಟ್‌ನರ್' ಗಳಿದ್ದಂತೆ. ಅವರೂ ಸಹ ಗೆದ್ದವರನ್ನು ಒತ್ತೆಯಾಳಾಗಿ ಇಟ್ಟುಕೊಂಡು ಹಾಕಿದ ಬಂಡವಾಳವನ್ನು ಕಾಂಟ್ರಾಕ್ಟುಗಳು, ಲೈಸೆನ್ಸ್‌ಗಳು ಇತ್ಯಾದಿಗಳನ್ನು ಪಡೆಯುವ ಮೂಲಕ ಮಾಡದ ಕಾಮಗಾರಿಗೆ ಬಿಲ್‌ಗಳನ್ನು ಸಲ್ಲಿಸಿ ಪಾಸು ಮಾಡಿಸಿಕೊಂಡು ತಮ್ಮ ತಿಜೋರಿ ತುಂಬಿಸಿಕೊಳ್ಳುತ್ತಾರೆ. ಹೀಗೆ ಚುನಾವಣೆ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ.

ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಹೊಂದಾಣಿಕೆ ಮಾಡಿಕೊಳ್ಳುತ್ತವೆ. ಇದಕ್ಕೆ ಯಾವ ಕಾನೂನೂ ಇಲ್ಲ. ಅದೇ ರೀತಿ ಚುನಾವಣಾ ಮತ ಕ್ಷೇತ್ರದ ಎಲ್ಲ ಅಭ್ಯರ್ಥಿಗಳೂ ಒಟ್ಟಾಗಿ ಸೇರಿ ಅಕ್ರಮಗಳನ್ನು ಮಾಡದಂತೆ ಒಂದು ಒಪ್ಪಂದಕ್ಕೆ ಬರುವುದು ಕಷ್ಟವಾದರೂ ಅಸಾಧ್ಯವೇನಲ್ಲ. ಎಲ್ಲರಿಗೂ ಮನಸ್ಸು ಇರಬೇಕಾದುದು ಮುಖ್ಯ. ಅಂತಹ ಮನಸ್ಸು ಇದ್ದರೆ ಬದಲಾವಣೆ ತರಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಕರೆಗೆ ಓಗೊಟ್ಟ ಚಿಕ್ಕಮಗಳೂರು ಕ್ಷೇತ್ರದ ವಿವಿಧ ಪಕ್ಷಗಳ ಸಂಭಾವ್ಯ ಅಭ್ಯರ್ಥಿಗಳೆಲ್ಲರೂ ಕಳೆದ ವಾರ ಸಿರಿಗೆರೆಗೆ ಬಂದು ನಮ್ಮ ಸಮ್ಮುಖದಲ್ಲಿ ಸುದೀರ್ಘ ಚರ್ಚೆ ನಡೆಸಿ ತಾವು ಚುನಾವಣೆಯಲ್ಲಿ ಹಣ, ಮದ್ಯ, ಸೀರೆ, ಪಂಚೆ ಮುಂತಾದವುಗಳನ್ನು ಹಂಚುವುದೂ ಸೇರಿದಂತೆ ಯಾವುದೇ ಚುನಾವಣಾ ಅಕ್ರಮ ಮಾಡುವುದಿಲ್ಲ ಎಂದು ಸ್ವಯಂಪ್ರೇರಣೆಯಿಂದ ಪ್ರಮಾಣ ಮಾಡಿ ಒಪ್ಪಂದಕ್ಕೆ ರುಜು ಹಾಕಿದ್ದಾರೆ. ಚಿಕ್ಕಮಗಳೂರು ನಗರದಲ್ಲಿ ಬೃಹತ್ ಸಮಾವೇಶವನ್ನು ಮಾಡಿ ಅದರಲ್ಲಿ ಎಲ್ಲ ಪಕ್ಷಗಳ ಅಧಿಕೃತ ಅಭ್ಯರ್ಥಿಗಳು ತಾವು ಚುನಾವಣಾ ಅಕ್ರಮಗಳನ್ನು ಮಾಡುವುದಿಲ್ಲವೆಂದು ಸಾರ್ವಜನಿಕರ ಎದುರು ಪ್ರಮಾಣ ಮಾಡಲಿದ್ದಾರೆ.

ಇದು ಒಳ್ಳೆಯ ಕಾರ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇದು ಯಶಸ್ವಿಯಾಗಲು ಸಾಧ್ಯವೇ ಎಂಬ ಸಂದೇಹ ಅನೇಕರಲ್ಲಿದೆ. ಮದುವೆಗೆ ಮುನ್ನವೇ ಗಂಡನ್ನು ಅನುಮಾನಿಸುತ್ತಾ ಹೋದರೆ ಯಾರ ಮಗಳ ಮದುವೆಯೂ ಆಗುವುದಿಲ್ಲ, ಗಂಡು ಒಳ್ಳೆಯವನೇ ಎಂದು ನಂಬಬೇಕಾಗುತ್ತದೆ. ಆ ನಂಬಿಕೆಯನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ಎಲ್ಲ ಪಕ್ಷದ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರ ಮೇಲಿದೆ.

4.4.2013

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ